ತುಂಬಾ ಚನ್ನಾಗಿ ಕತೆ ಬರ್ದವ್ನೆ...' ಎಂದಿದ್ದ! ನಾನು ಹತ್ತಲು ಹಿಮಾಲಯ ಪರ್ವತ ಹುಡುಕುತ್ತಿದ್ದೆ.

10 ವರ್ಷಗಳ ಹಿಂದೆ ನಮ್ಮ ಪಕ್ಕದ ಊರಾದ ಬಾಲ್ಯದ ಕೆಂಪಚೌಡಮ್ಮನನ್ನು ಹೆಂಡತಿ ಮಕ್ಕಳ ಸಮೇತ ಮಾತನಾಡಿಸಲು ಹೋಗಿದ್ದೆ. 85 ವರ್ಷದ ಕೆಂಪಚೌಡಮ್ಮ 'ಓಹೋ ಏನಪ್ಪ ಸುಬೇದಾರ ಗೊಣ್ಣೆ ಸುರಿಸ್ಕೊಂಡು ಗಳಗಂಟೆ ಅಲ್ಲಾಡಿಸ್ಕೊಂಡು ಓಡಾಡ್ತಿದ್ದೆ. ಒಳ್ಳೆ ಕೆಲ್ಸದಲ್ಲಿದ್ದೀಯಂತೆ. ಹೋಗ್ಲೀಳು ಯಾಸಟ್ಗೆ. ನನ್ಮೇಲೂ ಏನೇನೋ ಬರ್ದಿದ್ದೀಯಲ್ವಂತೊ ನನ್ ಗಡ್ಡೆ...' ಎಂದು ಕೋಲಿನಿಂದ ಪ್ಯಾಂಟಿಗೆ ತಿವಿಯುತ್ತಾ ಬೊಚ್ಚುಬಾಯಿ ತುಂಬಾ ನಕ್ಕಿದ್ದಳು.

ಒಮ್ಮೆ ಗೆಳೆಯರೊಬ್ಬರು ನನ್ನ ಜೊತೆ ನಮ್ಮೂರಿಗೆ ಬಂದಿದ್ದರು. ತೋಟದಲ್ಲಿ ಕೆಲಸ ಮಾಡುತ್ತಿದ್ದ ಮಾದಿಗರ ರಾಮ ನಾನು ಕೊಟ್ಟ ದುಡ್ಡು ಸಾಲದೆಂದು ನನ್ನ ಅಂಗಿ ಜೇಬಿಗೆ ಕೈ ಇಡಲು ಬಂದಿದ್ದ. ಜೊತೆಯಲ್ಲಿದ್ದ ಸ್ನೇಹಿತ 'ರ್ರೀ ಅವ್ರು ದೊಡ್ಡ ಕತೆಗಾರ್ರು, ಏನ್ರಿ ನೀವು ಹಿಂಗಾಡ್ತೀರ...' ಎಂದಿದ್ದರು. 'ಓಹೋ ಸುಮ್ಕಿರ್ರಿ ಆಯಪ್ಪ ಬರ್ಯೊ ತರ್ಲೆ ಚಿಕ್ಕುಡುಗ್ನಾಗಿಂದ್ಲೂ ಕಂಡಿದ್ದೀನಿ...' ಎಂದು ರಾಮ ಎಲೆಯಡಿಕೆಯ ಹಲ್ಲುಗಳನ್ನು ಬಿಟ್ಟಿದ್ದ. ಭತ್ತ, ರಾಗಿ, ಅಕ್ಕಿ ಕ್ಲೀನು ಮಾಡಲು ಬರುತ್ತಿದ್ದ ಮಾದಿಗರ ಬಸ್ತೆಮ್ಮ, ಸಂಜೀವಮ್ಮ, ಹೊಲೆಯರ ಸಿನ್ನಂಗಮ್ಮ ಮುಂತಾದವರು 'ಬಲ್ ತೀಟೆ ತಿಗ್ದೋನಾಗಿದ್ದೀಯಪ್ಪ ಕೇಶ್ವಣ್ಣ ನೀನು...' ಎಂದು ನನ್ನ ಕ್ರಿಯಾಶೀಲತೆಯನ್ನು ಆಗಾಗ ಕೊಂಡಾಡುತ್ತಲೇ ಇರುತ್ತಿದ್ದರು.

'ಏನ್ ನಿನ್ ತಲೇಲಿ ಮಣ್ಣು...' ಎಂದು ಮಿಡ್ಲಿಸ್ಕೂಲಿನ ಮಾಸ್ತರೊಬ್ಬರು ನಾನು ಹೋಂವರ್ಕನ್ನು ಸರಿಯಾಗಿ ಮಾಡಿದ್ದಾಗಲೂ ಹೇಳಿದಾಗ 'ನನ್ ತಲೇಲಿ ಮಣ್ಣೆ ಇರ್ಲಿ ಬಿಡಿ ಸಾರ್. ರಾಗಿ, ಭತ್ತ, ಕಡ್ಲೆಕಾಯಿ, ಕಬ್ಬು ಎಲ್ಲಾ ಬೆಳ್ಯೋದು ಮಣ್ಣಿಂದ್ಲೆ ಅಲ್ವ ಸಾ...' ಎಂದು ಹೇಳಿ ಮಾಸ್ತರನ್ನೆ ಬೆಚ್ಚಿಬೀಳಿಸಿದ್ದೆ. ಇತಿಹಾಸದ ಮಾಸ್ತರು ಬುದ್ಧನ ಉಪದೇಶಗಳನ್ನು ಕ್ಲಾಸಿನಲ್ಲಿ ಪಾಠ ಮಾಡುವಾಗ 'ನಿರ್ವಾಣ ಹೊಂದೋದೂ ಒಂದು ದೊಡ್ಡ ಆಸೆ ಅಲ್ವ ಸಾ. ಒಂದು ಆಸೆಯನ್ನು ಈಡೇರಿಸಿಕೊಳ್ಳೋದುಕ್ಕೆ ಇನ್ನೊಂದು ಆಸೆಯನ್ನು ಏಕೆ ಬಿಡ್ಬೇಕು ಸಾ...' ಎಂದು ಹೇಳಿ ಉಗಿಸಿಕೊಂಡಿದ್ದೆ.

ಯಾವುದೇ ಕಾಲಘಟ್ಟದ ಸಾಹಿತ್ಯ ಸೃಷ್ಟಿ ಆಯಾ ಕಾಲಘಟ್ಟದ 'ವರ್ತಮಾನ'ದ ಮೇಲೆ ಬೆಳಕು ಚೆಲ್ಲುವಂತಿರಬೇಕು. ರಾಮ, ಕೃಷ್ಣ, ರಾವಣರನ್ನು ಕಟ್ಟಿಕೊಂಡು ಇವೊತ್ತು ನಮಗೇನೂ ಆಗ ಬೇಕಾಗಿದ್ದಿಲ್ಲ. ಜನ ಸಮುದಾಯದ ವರ್ತಮಾನದ ಸಂಕಟಗಳು ಸಾಹಿತ್ಯದ ಹಂದರವಾಗಬೇಕು. ವಿಶ್ವಮಾನವತ್ವದ ಬಗ್ಗೆ ಮಾತನಾಡುತ್ತಲೇ ಯಾರೊಬ್ಬರನ್ನೂ ಮಾತನಾಡಿಸದಂಥ, ಸಮಾನತೆಯ ಬಗ್ಗೆ ಮಾತನಾಡುತ್ತಲೇ ಹೆಂಡತಿ – ಮಕ್ಕಳನ್ನು ಇನ್ನಿಲ್ಲದಂತೆ ಕಡೆಗಾಣಿಸಿರುವ ಸಾಹಿತಿಗಳನ್ನು ನಾನು ಕಂಡಿದ್ದೇನೆ. ಸಾಹಿತಿಗಳು ಕೂಡ ನರಮಾನವರೇ! ಗಾಂಧಿ ಹೇಳುತ್ತಾರೆ: 'ಮಾನವೀಯತೆಗಿಂತ ಮಿಗಿಲಾದ ಜಾತಿಯಿಲ್ಲ, ಧರ್ಮವಿಲ್ಲ, ಮತವಿಲ್ಲ, ಕಾನೂನಿಲ್ಲ, ದೇವರೂ ಇಲ್ಲ' ಎಂದು. ಸಾಹಿತ್ಯದ ಎಲ್ಲಾ ತಿಣುಕಾಟಗಳು ಕೂಡ ಮಾನವೀಯತೆಯನ್ನು ಆಲಂಗಿಸಿಕೊಳ್ಳುವುದೇ ಆಗಬೇಕೆಂದು ನನ್ನ ಅಭಿಪ್ರಾಯ.

ಒಟ್ಟಿನಲ್ಲಿ ಹೇಳಬೇಕೆಂದರೆ ಕನ್ನಡದ ಕಥಾ ಪ್ರಪಂಚ ಸಮೃದ್ಧವಾಗಿ ಬೆಳೆಯುತ್ತಿದೆ. ಕಾಲ ಕಾಲಕ್ಕೆ ತಕ್ಕಂತೆ ಕಥಾ ವಸ್ತು, ತಂತ್ರಗಾರಿಕೆ, ನಿರೂಪಣಾ ಶೈಲಿ, ಭಾಷಾ ಪ್ರಯೋಗ ಎಲ್ಲಾ ವಿಧಾನಗಳಲ್ಲೂ ಬದಲಾಣೆಯನ್ನು ಕನ್ನಡದ ಕಥಾ ಜಗತ್ತು ಕೂಡ ಅನುಭವಿಸುತ್ತಿದೆ. ಮುವತ್ತೈದು ವರ್ಷಗಳಿಂದ ಕತೆಗಳನ್ನು ಬರೆಯುತ್ತಿದ್ದರೂ, ಬರೆಯುವ ಮೋಹ ನನ್ನಲ್ಲಿ ಕಡಿಮೆಯಾಗಿಲ್ಲ. ಕನ್ನಡದ ಕತೆಗಾರನೆಂಬ ಹೆಮ್ಮೆ ಸದಾ ನನ್ನಲ್ಲಿ ಹಸಿರಾಗಿಯೇ ಇರುತ್ತದೆ.

✿